– –                                        ಓ.ಎಸ್. ನಂಬರ:29 /2021

**ಡಿ. ಡಬ್ಲ್ಯೂ: 1**

**(ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾ: 29/06/2024 )**

**ಮುಂದುವರೆದ ಮುಖ್ಯ ವಿಚಾರಣೆ ಃ ವಾದಿ ಪರ ಶ್ರೀ ಸಿ ಆರ್ ಪಿ ವಕೀಲರಿಂದ,**

ನಾನು ಪಿಯುಸಿ ವರೆಗೆ ಒದಿರುತ್ತೇನೆ. ನಾನು ಕೂಲಿ ಕೆಲಸ ಮಾಡುತ್ತೇನೆ. 2 ನೇ ಪ್ರತಿವಾದಿ ನನ್ನ ಹೆಂಡತಿ ಆಗಿದ್ದಾರೆ. ಅವರು ಶಾಲೆ ಕಲಿತಿರುವುದಿಲ್ಲ. ನನ್ನ ಹೆಂಡತಿಗೆ ಮೊದಲು ಸಹಿ ಹಾಕಲು ಬರುತ್ತಿತ್ತು. ಈಗ ಹಾಕಲು ಆಗುವುದಿಲ್ಲ. ಸರ್ವೇ ನಂಬರ್ 106 ರ ಆಸ್ತಿಯ ಮೇಲೆ ವಾದಿಯು ದಾವೆಯನ್ನು ಹಾಕಿರುತ್ತಾರೆ.ನಾವು ದಾವಾಸ್ತಿಯ ಮನೆಯಲ್ಲಿ ವಾಸವಾಗಿದ್ದೇವೆ. ದಾವಾಸ್ತಿಯ ಮನೆಯ ಡೋರ್ ನಂಬರ್ 130 ಆಗಿದೆ. ಸದರಿ ಮನೆ ಹಂಚಿನ ಮನೆ ಆಗಿರುತ್ತದೆ. ಮನೆಯ ವಿಸ್ತೀರ್ಣ ನನಗೆ ಗೊತ್ತಿಲ್ಲ. ಸದರಿ ಮನೆ ಎಷ್ಟು ವರ್ಷಗಳ ಹಿಂದೆ ಕಟ್ಟಿದ್ದಾರೆಂದು ನನಗೆ ಗೊತ್ತಿಲ್ಲ. ಸದರಿ ಮನೆಯು 2 ಬೆಡ್ ರೂಮ್ ನ ಮನೆಯಾಗಿದೆ. ಸದರಿ ಮನೆ ಒಂದೇ ಮಹಡಿಯ ಮನೆಯಾಗಿದೆ. ದಾವಾಸ್ತಿಯು ಪಂಚಾಯತಿಯ ಡಾಂಬರು ರಸ್ತೆಯಿಂದ 150 ಮೀಟರ್ ಒಳಗೆ ಇದೆ. 2012 ರಲ್ಲಿ ದಾವಾಸ್ತಿಯ ಮನೆಗೆ ನಾವು ಬಂದಿದ್ದೇವೆ. ದಾವಾಸ್ತಿಗೆ ನಾವು ಬರುವಾಗ ಮನೆಯು ಇತ್ತು. ದಾವಾಸ್ತಿಯ ಮನೆಯನ್ನು ವಾದಿಯೇ ಕಟ್ಟಿರಬಹುದು. ನಾವು ಬರುವಾಗ ಮನೆಯಲ್ಲಿ ಕರೆಂಟ್ ಕನೆಕ್ಷನ್ ಇತ್ತು. ಇವತ್ತಿಗೂ ಕರೆಂಟ್ ಕನೆಕ್ಷನ್ ವಾದಿಯ ಹೆಸರಿನಲ್ಲಿದೆ. ದಾವಾಸ್ತಿಗೆ ಬರುವ ಮುಂಚೆ ನಾವು ಹಡಿಲು ಗ್ರಾಮದ ಸ್ವಂತ ಮನೆಯಲ್ಲಿ ಇದ್ದೇವು. ವಾದಿಗೆ ದಾವಾಸ್ತಿ ಹೇಗೆ ಬಂದಿದೆ ಎಂದು ನನಗೆ ಗೊತ್ತಿಲ್ಲ. ವಾದಿಯು ಯಾವೆಲ್ಲಾ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರಪಡಿಸಿರುವುದನ್ನು ನಾನು ನೋಡಿಲ್ಲ. ವಾದಿಯ ಅನುಮತಿಯ ಮೇರೆಗೆ ನಾವು ದಾವಾಸ್ತಿಯ ಮನೆಯಲ್ಲಿ ವಾಸವಾಗಿದ್ದೇವು. ನಾವು ಬಾಡಿಗೆಗಾಗಿ ದಾವಾಸ್ತಿ ಯಲ್ಲಿ ಇರಲಿಲ್ಲ. ನಾವು ಒಂದೇ ಬಾರಿ ರೂ. 5,40,000 ಮೊತ್ತವನ್ನು ಕೊಟ್ಟು ದಾವಾಸ್ತಿ ಯ ಮನೆಯಲ್ಲಿ ವಾಸವಾಗಿದ್ದೇವೆ. ನಿಡಿ–1 ದಾವಾಸ್ತಿ ಯ ಪಹಣಿ ಆಗಿದೆ. ನಿಡಿ–1 ರಲ್ಲಿ ದಾವಾಸ್ತಿಯ ಮಾಲೀಕರು ವಾದಿ ಎಂದು ತೋರಿಸಿರುತ್ತಾರೆ ಮತ್ತು ಅದು ಸರಿ ಇದೆ. ವಾದಿಯೊಂದಿಗೆ ಕರಾರನ್ನು ನನ್ನ ಹೆಂಡತಿಯಾದ 2 ನೇ ಪ್ರತಿವಾದಿಯು ಮಾಡಿಕೊಂಡಿರುತ್ತಾರೆ. ಸದರಿ ಕರಾರನ್ನು ನಾನು ಓದಿರುವ ಬಗ್ಗೆ ನೆನಪಿಲ್ಲ ಮತ್ತು ಅದರಲ್ಲಿ ಏನು ಬರೆಯಲಾಗಿದೆ ಎಂದು ನೆನಪಿಲ್ಲ. ಅದನ್ನು ನೊಂದಣಿ ಮಾಡಿಲ್ಲ. ಕರಾರಿಗೆ ಸಹಿ ಹಾಕುವಾಗ ನಾನು , 2 ನೇ ಪ್ರತಿವಾದಿ , ವಾದಿ, ಈರಪ್ಪ ನಾಯ್ಕ ಮತ್ತು

ಗೋವ್ಸು ವಕೀಲರು ಇದ್ದೇವು. ಕರಾರು ಪತ್ರಕ್ಕೆ ಈರಪ್ಪ ನಾಯ್ಕ ಮತ್ತು ವಾದಿಯ ಗಂಡ ಸಾಕ್ಷಿಯಾಗಿ ಸಹಿ ಹಾಕಿರುತ್ತಾರೆ. ಒಟ್ಟು ರೂ. ಐದುವರೆ ಲಕ್ಷಕ್ಕೆ ಮಾತುಕತೆ ಆಗಿತ್ತು. ನಾವು ರೂ. 5,10,000 ಕೊಟ್ಟಿರುತ್ತೇವೆ. ರೂ. 30,000 ಒಂದು ವಾರದ ನಂತರ ಕೊಟ್ಟಿರುತ್ತೇನೆ. ರೂ. 30,000 ಕೊಡುವಾಗ ರಶೀದಿ ಮಾಡಿಕೊಂಡಿಲ್ಲ. ರೂ. 30,000 ಕೊಡದೇ ಇದ್ದ ಕಾರಣ ರಶೀದಿ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು 2 ನೇ ಪ್ರತಿವಾದಿ ಒಟ್ಟು ಸೇರಿ ರೂ. 5,40,000 ಒಟ್ಟಿಗೆ ಸೇರಿ ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ನನ್ನ ಹತ್ತಿರ ರೂ. 5,40,000 ಮೊತ್ತ ಇರಲಿಲ್ಲ ಮತ್ತು ನಾವು ಹಣವನ್ನು ವಾದಿಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಸ್ವತ್ತನ್ನು ಪರಭಾರೆ ಮಾಡಬಾರದೆಂದು ಸರಕಾರದ ಷರತ್ತು ಇದ್ದ ಕಾರಣ ನಾವು ರಜಿಸ್ಟ್ರೇಷನ್ ಅನ್ನು ಮಾಡಿಕೊಂಡಿಲ್ಲ. 2012 ರಲ್ಲಿ ಸದರಿ ದಾವಾಸ್ತಿಯನ್ನು ಪರಭಾರೆ ಅಥವಾ ಯೋಜನೆ ಮಾಡಬಾರದೆಂದು ನನಗೆ ಗೊತ್ತಿಲ್ಲ ನನಗೆ ವಾದಿಯೇ ಹೇಳಿದ್ದಾರೆ. ವಾದಿಯು ಹಾಗೆ ಹೇಳಿದ ನಂತರ ನಾವು ಬೇರೆಯವರಿಗೆ ಕೇಳಿ ತಿಳಿದುಕೊಂಡಿಲ್ಲ. ಕರಾರಿನ ಆಧಾರದ ಮೇಲೆ ದಾವಾಸ್ತಿಯ ಸ್ವಾಧೀನ ಪಡೆದಿದ್ದೇವೆ. ದಾವಾಸ್ತಿಯಲ್ಲಿ ನಾನೇ ಹಾಕಿರುವ ಅಡಿಕೆ ಮರ ಮತ್ತು ತೆಂಗಿನ ಮರ ಇರುತ್ತವೆ. ದಾವಾಸ್ತಿಯಲ್ಲಿ ನಾವು 12 ವರ್ಷಗಳಿಂದ ಇದ್ದೇವು.ದಾವಾಸ್ತಿಯ ಪರಿಸರದಲ್ಲಿ ಸುಮಾರು ಮನೆಗಳು ಮತ್ತು ಶಾಲೆ ಇವೆ. ದಾವಾಸ್ತಿಯ ಬಾವಿಯಲ್ಲಿ ನೀರು ಇರುತ್ತದೆ. ಸೆಕೆ ಕಾಲದಲ್ಲಿ ಸ್ವಲ್ಪ ಇರುತ್ತದೆ. ಮಳೆಗಾಲದಲ್ಲಿ ದಾವಾಸ್ತಿಯ ಮನೆಯಲ್ಲಿ ನೀರು ನುಗ್ಗುವುದಿಲ್ಲ. ದಾವಾಸ್ತಿಯ ಮನೆಗೆ ಅಂದಾಜು ರೂ. 2,000 ದಿಂದ 5,000 ಬಾಡಿಗೆ ಬರಬಹುದು ಎಂದರೆ ನನಗೆ ಗೊತ್ತಿಲ್ಲವೆಂದು ಉತ್ತರಿಸಿರುತ್ತಾರೆ. ನನ್ನ ಮತ್ತು 2 ನೇ ಪ್ರತಿವಾದಿಯ ಮೇಲೆ ಯಾವುದೇ ಕ್ರಿಮಿನಲ್ ಪ್ರಕರಣ ದಾಖಲಿಸಿಲ್ಲ. ವಾದಿಗೂ ಮತ್ತು 2 ನೇ ಪ್ರತಿವಾದಿಗೂ ಯಾವುದೇ ಮಾರಾಟದ ಕರಾರು ಆಗಿಲ್ಲ ಮತ್ತು 2 ನೇ ಪ್ರತಿವಾದಿಯ ಯಾವುದೇ ದುಡ್ಡನ್ನು ವಾದಿಗೆ ಕೊಟ್ಟಿದ್ದು ಅಲ್ಲ ಎಂದರೆ ಸರಿಯಲ್ಲ. ವಾದಿಯಿಂದ ದಾವಾಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಷಯ ಎಲ್ಲಾ ಸುಳ್ಳು ಎಂದರೆ ಸರಿಯಲ್ಲ.

ಮರು **ವಿಚಾರಣೆ ಇಲ್ಲ.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ**

**ಸಹಿ ಇದೆ**

ಪ್ರಧಾನ ಸಿವಿಲ್ ಜಡ್ಜ್, ಭಟ್ಕಳ.